




# ಮಂಜಿನ ಬೋಟ್ ಯಾತ್ರೆ!

ಇತಿಹಾಸದ ಯಾವುದೋ ಕಾಲಘಟ್ಟದಲ್ಲಿ ಸಂಶೋಧಕರು ಮುಂದಿಟ್ಟ ವಾದಗಳು ಮತ್ಯಾವಾಗಲೋ ಸಂಶೋಧನೆಯ ರೂಪ ಪಡೆಯುವುದಿದೆ. ಅದರಲ್ಲೂ ಇತ್ತೀಚಿಗೆ ವಿದೇಶೀ ವಿಜ್ಞಾನಿಗಳು ಒಬ್ಬರ ಹಿಂದೊಬ್ಬರಂತೆ ಹಳೆಯ ಕಡತಗಳನ್ನು ತಿರುಗಿಸುತ್ತಾ ಪ್ರಸಿದ್ಧಿಯ ತುತ್ತ ತುದಿಗೇರುವ ಕನಸು ಹೊಸೆಯುತ್ತಿದ್ದಾರೆ. ಪ್ರಾಯೋಗಿಕ ಸಂಗತಿಗಳಿಗೆ ಹೆಚ್ಚಿನ ಒತ್ತು ನೀಡುವ ಕೆಲವು ಚಾನೆಲ್‌ಗಳೂ ಈಗ ಈ ಕೆಲಸದಲ್ಲಿ ತೊಡಗಿಸಿಕೊಂಡಿವೆ.

ಎರಡನೇ ವಿಶ್ವ ಸಮರದ ವೇಳೆಗೆ ಉಕ್ಕಿನ ಕೊರತೆ ಆದಾಗ ಜೆಫ್ರಿ ಪೈಕ್ ಎಂಬ ಸಂಶೋಧಕನೊಬ್ಬ ಉಕ್ಕಿನ ಹೊರತಾಗಿ ಬೇರೆ ಕಚ್ಚಾ ವಸ್ತುಗಳನ್ನು ಬಳಸಿಕೊಂಡು ಬೋಟ್ ತಯಾರಿಸುವ ಬಗ್ಗೆ ಮಾತನಾಡಿದ್ದ. ಮಂಜುಗಡ್ಡೆಗೆ ಮರದ ಹುಡಿಯನ್ನು ಸೇರಿಸಿ ಮಾನವ ವಾಹಕ ಬೋಟ್ ತಯಾರಿಸಬಹುದು ಎಂಬುದಾಗಿಯೂ ಹೇಳಿಬಿಟ್ಟ!

ಆದರೆ ಆಗ ಮಂಜುಗಡ್ಡೆ ಕರಗುವ ಭೀತಿಯಿಂದ ಯಾರೂ ಅಂತಹ ಬೋಟ್ ತಯಾರಿಸಲು ಮುಂದಾಗಲಿಲ್ಲ. ಆದರೆ ಎರಡು ತಿಂಗಳ ಹಿಂದೆ ಬಿ.ಬಿ.ಸಿ ಸುದ್ದಿ ವಾಹಿನಿಯ ತಂಡವೊಂದು ಮಂಜುಗಡ್ಡೆಯಿಂದ ಬೋಟ್ ತಯಾರಿಸಿ ಯಾನಕ್ಕೆ ಹೊರಟೇಬಿಟ್ಟಿತು!

ಪೈಕ್‌ನ ಪ್ರತಿಪಾದನೆಯನ್ನು ಪರೀಕ್ಷಿಸುವ ಸಲುವಾಗಿಯೇ ಬಿ.ಬಿ.ಸಿ ತಂಡ, 5000 ಲೀಟರ್ ನೀರಿಗೆ ಮರದ ಹೊಟ್ಟು ಮಿಶ್ರಣ ಮಾಡಿ ಅದನ್ನು ಮಂಜುಗಡ್ಡೆಯಾಗಿಸಿತು. ಈ ಕಾರ್ಯಕ್ಕೆ 3 ವಾರ ತಗಲಿದವು. ಅಂತೂ 20 ಅಡಿ ಉದ್ದದ ಮಂಜುಗಡ್ಡೆ ಬೋಟ್ ಸಿದ್ಧವಾಯಿತು. ಒಂದು ಗಂಟೆ ನೀರಿನಲ್ಲಿ ಸಾಗಿರಬಹುದು, ಅಷ್ಟರಲ್ಲಿಯೇ ಬೋಟ್ ನಿಧಾನಕ್ಕೆ ಕರಗಲಾರಂಭಿಸಿತು. ಸ್ವಲ್ಪ ಹೊತ್ತಿನಲ್ಲೇ ಅದು ಮುಳುಗಿಯೂ ಹೋಯಿತು. ಮುಳುಗುತ್ತಿದ್ದ ಬಿ.ಬಿ.ಸಿ. ಯ ತಂತ್ರಜ್ಞರನ್ನು ಬೇರೆ ನೌಕೆಯ ಮೂಲಕ ಪಾರು ಮಾಡಲಾಯಿತಂತೆ!

■ ಮೇಧಾ ನಾಗರಾಜ್

# ಲೈಬ್ರರಿ ಬಿಲ್ಡಿಂಗ್

ಗ್ರಂಥಾಲಯಗಳು ಇರುವುದು ಜ್ಞಾನಾರ್ಜನೆಗಾಗಿ. ಆದರೆ ಜನ ಗ್ರಂಥಾಲಯಗಳಿಗೆ ಬರದಿದ್ದರೆ ಏನು ಮಾಡುವುದು?

ಅಮೆರಿಕದ ಮಿಸ್ಸೋರಿಯ ನಗರ ಗ್ರಂಥಾಲಯ ಜನರನ್ನು ಪುಸ್ತಕಗಳತ್ತ ಆಕರ್ಷಿಸಲು ತನ್ನ ಕಟ್ಟಡವನ್ನೇ ಬೃಹತ್ ಪುಸ್ತಕಗಳ ರೀತಿಯಲ್ಲಿ ವಿನ್ಯಾಸಗೊಳಿಸಿದೆ. ಜಗತ್ತಿನ ಅತ್ಯಂತ ಕುತೂಹಲಕರ ಕಟ್ಟಡಗಳಲ್ಲಿ ಒಂದಾಗಿರುವ ಈ ಲೈಬ್ರರಿಯನ್ನು ಹೊರಗಿನಿಂದ ನೋಡಿದಾಕ್ಷಣ ಒಳಗೆ ಹೋಗಿ ಪುಸ್ತಕಗಳನ್ನು ಓದಲೇಬೇಕು ಅನ್ನಿಸುತ್ತದೆ. ಬೆಂಗಳೂರನ್ನು 'ಸಾಫ್ಟ್‌ವೇರ್ ನಗರ' ಎಂದು ಗುರುತಿಸುವ ಹಾಗೆ ಕನ್ಸಾಸ್ ನಗರವನ್ನು 'ಗ್ರಂಥಾಲಯ ಪಟ್ಟಣ' ಎಂದೇ ಕರೆಯುತ್ತಾರೆ. ನಗರದ ವಿವಿಧೆಡೆ ಗ್ರಂಥಾಲಯ ಶಾಖೆಗಳನ್ನು ಹೊಂದಿರುವ ಈ ಕೇಂದ್ರ ಗ್ರಂಥಾಲಯ, 2004ರಲ್ಲಿ ಕಟ್ಟಿದ ಈ ಪುಸ್ತಕ ಮಾದರಿಯ ಕಟ್ಟಡ ಎಲ್ಲರ ಗಮನ ಸೆಳೆಯುತ್ತಿದೆ.

■ ಮುರಳೀಧರ

